ಮಾನ್ಯ ಸದಸ್ಯರು: ಗ್ರಾನೈಟ್ ಕಲ್ಲುಗಳಂತೂ 30-40 ಟನ್‌ಗಳಷ್ಟು ಹಿಡಿಯುತ್ತದೆ.

ಶ್ರೀ ಸಿ.ಎಂ.ಉದಾಸಿ: ಇದರ ಬಗ್ಗೆ ನಾವು ತೀವ್ರವಾಗಿ ಪರಿಗಣಿಸುತ್ತೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ನನ್ನ ಕೊನೆಯ ಪ್ರಶ್ನೆಯೇನೆಂದರೆ, ಕನಕಪುರ-ಮಂಗಳೂರು ರಸ್ತೆಯಲ್ಲಿ ಕಲ್ಲನ್ನು ತುಂಬಿಕೊಂಡು ಲಾರಿಗಳು ಹೋಗುತ್ತವೆ, ಆ ರಸ್ತೆಯಲ್ಲಿನ ಸೇತುವೆಗಳು ಬಿದ್ದುಹೋಗಿದ್ದು, ರಸ್ತೆ ಗುಂಡಿಯಾಗಿದೆ. ಮಾನ್ಯ ಅಧ್ಯಕ್ಷರು ಹೇಳಿದಂತೆ ಸುಮಾರು 15-20 ಟನ್‌ಗಳಷ್ಟು ಲೋಡ್ ಹಾಕಿಕೊಂಡು ಹೋಗುತ್ತಿರುವುದರಿಂದ ರಸ್ತೆಗಳು ಹಾಳಾಗಿವೆ. ಆದುದರಿಂದ, ದಯಮಾಡಿ, ಈ ವರ್ಷ ಯಾವುದರಲ್ಲಾದರೂ ಈ ರಸ್ತೆಯ ಅಭಿವೃದ್ಧಿ ಕಾಮಗಾರಿ ತೆಗೆದುಕೊಂಡರೆ ನಮಗೆ ಅನುಕೂಲವಾಗುತ್ತದೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಈ ವರ್ಷ ಈ ರಸ್ತೆಯ ಕಾಮಗಾರಿ ಕೆಲಸ ತೆಗೆದುಕೊಳ್ಳುವ ಬಗ್ಗೆ ಭರವಸೆ ಕೊಡಬೇಕೆಂದರೆ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕೊಡಬೇಕಾಗುತ್ತದೆ ಆದುದರಿಂದ, ಹಣಕಾಸಿನ ಲಭ್ಯತೆಗನುಗುಣವಾಗಿ ಇದಕ್ಕೆ ಅಗ್ರ ಪ್ರಾಶಸ್ತ್ಯ ನೀಡಲಾಗುವುದೆಂದು ಹೇಳಬಯಸುತ್ತೇನೆ.

ವಿಷಯ: ಹದಗೆಟ್ಟಿರುವ ಹುಬ್ಬಳ್ಳಿ-ಬಾಗಲಕೋಟೆ ಹೆದ್ದಾರಿ ರಸ್ತೆ

521 (4060)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಬಾಗಲಕೋಟೆ ನಡುವಿನ ಹೆದ್ದಾರಿ ರಸ್ತೆಯು ತೀರಾ ಹದಗೆಟ್ಟು ವಾಹನಗಳ ಸಂಚಾರಕ್ಕೆ ಅನಾನುಕೂಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ರಸ್ತೆಯನ್ನು ಅಗಲ ಮಾಡುವ ಯೋಜನೆ ಇದೆಯೇ?

ಇ) ಈ ರಸ್ತೆ ಸುಧಾರಣೆಗಾಗಿ ಸರ್ಕಾರವು ಶೀಘ್ರ ಕ್ರಮ ಕೈಕೊಳ್ಳುವರೆ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಹುಬ್ಬಳ್ಳಿಯಿಂದ-ಗದ್ದನಕೇರಿ ಕ್ರಾಸ್‌ನ ವರೆಗೆ 116 ಕಿ.ಮೀ. ಇದ್ದು, ಇದರಲ್ಲಿ 50 ಕಿ.ಮೀ. ರಸ್ತೆ 5.5 ಮೀ ಅಗಲವಿದ್ದು, ವಾಹನ ಸಂಚಾರಕ್ಕೆ ತೊಂದರೆ ಇರುವುದಿಲ್ಲ.

ಇನ್ನುಳಿದ 6 ಕಿಮೀ. ರಸ್ತೆಯು ಏಕ ಪಥ 3.75 ಮಿ. ಡಾಂಬರೀಕರಣವಾಗಿದ್ದು, ವಾಹನ ಸಂಚಾರವು ಅಧಿಕವಾಗಿರುವುದರಿಂದ ಈ ಏಕಪಥ ಭಾಗದ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅನಾನುಕೂಲವಾಗಿದೆ.

ಆ) 1997-98ರ ಸಾಲಿನಲ್ಲಿ ಏಕಪಥ ರಸ್ತೆಯ ಒಟ್ಟು 64 ಕಿಮೀ.ನಲ್ಲಿ 14 ಕಿ.ಮೀ. ರಸ್ತೆಯನ್ನು ಆಯ್ದ ಭಾಗಗಳ 5.5 ಮಿ. ಬದಿಗಳನ್ನು ಅಗಲಗೊಳಿಸಿ ಖಡಿ ಮಾಡಿ ಡಾಂಬರೀಕರಣ ಮಾಡುವ ಕೆಲಸವು ಮಳೆ ಹಾನಿ ಕಾರ್ಯಕ್ರಮದಲ್ಲಿ ಪ್ರಗತಿಯಲ್ಲಿದೆ. ಉಳಿದ ಭಾಗದಲ್ಲಿ ಹಂತ ಹಂತವಾಗಿ ಬದಿಗಳನ್ನು ಅಗಲಗೊಳಿಸಿ ಡಾಂಬರೀಕರಣ ಕೆಲಸವನ್ನು ತೆಗೆದುಕೊಳ್ಳಲಾಗುವುದು.

ಇ) ಅನುದಾನದ ಲಭ್ಯತೆಯಂತೆ ಮತ್ತು ವಾಹನ ಸಾಂದ್ರತೆಯನ್ನು ಪರಿಗಣಿಸಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ-ಬಾಗಲಕೋಟೆ ರಸ್ತೆಯು ಅತ್ಯಂತ ಪ್ರಮುಖವಾದ ರಸ್ತೆಯಾಗಿರುವುದಲ್ಲದೆ ಯಾವಾಗಲೂ ಜನ, ವಾಹನ ದಟ್ಟಣೆಯಿಂದ ಕೂಡಿರುತ್ತದೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ 'ಇನ್ನುಳಿದ 66 ಕಿ.ಮೀ. ರಸ್ತೆಯು ಏಕಪಥ 3.75 ಮೀಟರ್ ಡಾಂಬರೀಕರಣವಾಗಿದ್ದು ವಾಹನ ಸಂಚಾರವು ಅಧಿಕವಾಗಿರುವುದರಿಂದ ಈ ಏಕಪಥ ಭಾಗದ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅನಾನುಕೂಲವಾಗಿದೆ' ಎಂದು ಒಪ್ಪಿಕೊಂಡಿದ್ದಾರೆ. ಆದುದರಿಂದ 66 ಕಿ.ಮೀ. ರಸ್ತೆಯನ್ನು ಅಗಲಗೊಳಿಸುವ ಕಾರ್ಯಕ್ರಮವನ್ನು ಯಾವಾಗ ಹಾಕಿಕೊಳ್ಳುತ್ತೀರಿ? ಅಲ್ಲದೆ, ಜನ ದಟ್ಟಣೆಯನ್ನು ನಿಯಂತ್ರಿಸಿ ರಸ್ತೆಯನ್ನು ಅಭಿವೃದ್ಧಿಗೊಳಿಸುವುದಕ್ಕೆ ಯಾವ ಕ್ರಮಗಳನ್ನು ಕೈಗೊಳ್ಳುತ್ತಿರೆಂಬುದನ್ನೂ ಸಹ ತಿಳಿಸಬೇಕು.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯಲ್ಲಿ ಗದ್ದನಕೇರಿ ಕ್ರಾಸ್‌ವರೆಗೆ 116 ಕಿ.ಮೀ. ಇದ್ದು ಇದರಲ್ಲಿ 50 ಕಿ.ಮೀ. ರಸ್ತೆ 5.5 ಮೀಟರ್‌ಗಳಷ್ಟು ಅಗಲವಿದ್ದು ವಾಹನ ಸಂಚಾರಕ್ಕೆ ತೊಂದರೆಯಿರುವುದಿಲ್ಲವೆಂದು, ಒಟ್ಟು 66 ಕಿ.ಮೀ.ಗಳಲ್ಲಿ 14 ಕಿ.ಮೀ. ರಸ್ತೆಯನ್ನು ಆಯ್ದ ಭಾಗಗಳ 5.5 ಮೀಟರ್ ಬದಿಗಳನ್ನು ಅಗಲಗೊಳಿಸುವ ಕಾರ್ಯಕ್ರಮವನ್ನು ಈಗಾಗಲೇ ಹಾಕಿಕೊಂಡಿದ್ದೇವೆ. ಏಕೆಂದರೆ, ಇದು ಪ್ರಮುಖ ರಸ್ತೆಯಾಗಿದ್ದು ಬರುವ ವರ್ಷ ಈ ಯೋಜನೆಯನ್ನು ತೆಗೆದುಕೊಳ್ಳಬೇಕೆನ್ನುವ ಪ್ರಾಶಸ್ತ್ಯದಲ್ಲಿ ಇಟ್ಟುಕೊಂಡಿದ್ದೇವೆಂದು ಹೇಳಲು ಇಚ್ಛಿಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಈ ರಸ್ತೆಯಲ್ಲಿ ಮಳೆಗಾಲದಲ್ಲಿ ತಗ್ಗು ಉಂಟಾಗಿ ಸುಮಾರು 2-3 ಗಂಟೆಗಳಷ್ಟು ಕಾಲ ವಾಹನಗಳು ನಿಲ್ಲುವಂಥ ಪ್ರಸಂಗ ಬರುತ್ತದೆ. ಅದಕ್ಕೋಸ್ಕರ ಬೆಣ್ಣೆಹಳ್ಳ ಸೇತುವೆ ಬಗ್ಗೆ ತಾವು ಏನು ಕ್ರಮ ಕೈಗೊಂಡಿದ್ದೀರಿ ಮತ್ತು ಈ ರಸ್ತೆ ಸುಧಾರಣೆಗಾಗಿ ಸರ್ಕಾರವು ಶೀಘ್ರ ಕ್ರಮ ಕೈಗೊಳ್ಳುವುದೇ ಎಂಬ ಪ್ರಶ್ನೆಗೆ 'ಅನುದಾನದ

ಲಭ್ಯತೆಯಂತೆ ಮತ್ತ ವಾಹನ ಸಾಂದ್ರತೆಯನ್ನು ಪರಿಗಣಿಸಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದೆಂದು ಉತ್ತರವನ್ನು ಕೊಟ್ಟಿದ್ದಾರೆ. ಅನುದಾನದ ಬಗ್ಗೆ ನಾನು ಇವೊತ್ತು ಮಾನ್ಯ ಉಪ ಮುಖ್ಯಮಂತ್ರಿಗಳನ್ನೂ ಸಹ ಕೇಳುತ್ತಿದ್ದೇನೆ. ದಯವಿಟ್ಟು ಲೋಕೋಪಯೋಗಿ ಇಲಾಖೆಗೆ ಹೆಚ್ಚಿನ ಅನುದಾನ ಕೊಡಬೇಕು. ಏಕೆಂದರೆ, ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ರಸ್ತೆಗಳು ಹಾಳಾಗಿವೆ. ಕೇವಲ ಉತ್ತರ ಕರ್ನಾಟಕದ ಕಡೆ ಮಾತ್ರವಲ್ಲ ಎಲ್ಲಾ ಕಡೆಗಳಲ್ಲೂ ರಸ್ತೆಗಳು ಹಾಳಾಗಿವೆ. ಮಾನ್ಯ ಉಪ ಮುಖ್ಯಮಂತ್ರಿಗಳು ಇಲಾಖೆಗೆ ಹೆಚ್ಚು ಹಣ ಕೊಟ್ಟರೆ ರಸ್ತೆ ಸುಧಾರಿಸುವುದಕ್ಕೆ ಸಾಧ್ಯವಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ. ಇದರ ಬಗ್ಗೆ ಉಪ ಮುಖ್ಯಮಂತ್ರಿಗಳು ಗಮನ ಹರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ರಾಜ್ಯದ ಕೆಲವು ಭಾಗಗಳಲ್ಲಿ ಮಳೆ ಹೆಚ್ಚು ಬಿದ್ದಿದೆಯೆನ್ನುವುದು ನಿಜ, ಹಾಗಾಗಿ ಅಲ್ಲಿ ರಸ್ತೆಗಳು ಹಾಳಾಗಿವೆ. ನಮ್ಮಲ್ಲಿ ರಸ್ತೆಗಳನ್ನು ಯಾವ ಗುಣಮಟ್ಟದಲ್ಲಿ ಕಾಪಾಡಿಕೊಳ್ಳಬೇಕೊ ಆ ಗುಣಮಟ್ಟದಲ್ಲಿ ಕಾಪಾಡಿಕೊಳ್ಳದಿರುವುದು ಒಂದು ಕೊರತೆ ಇದೆ. ಜೊತೆಗೆ ಮುಂದೆ 10-20 ವರ್ಷಗಳಿಗೆ ರಸ್ತೆಯ ಮೇಲೆ ಲೋಡ್ ಎಷ್ಟಾಗಬೇಕು? ಅದಕ್ಕೆ ತಕ್ಕಂತೆ ಸ್ಪೆಸಿಫಿಕೇಶನ್ ಏನು ಮಾಡಬೇಕೆನ್ನುವುದರ ಬಗ್ಗೆ ಮುಂದಾಲೋಚನೆ ಕೂಡ ಇಲ್ಲ, ಎಷ್ಟು ದುಡ್ಡು ಖರ್ಚು ಮಾಡಬೇಕೆನ್ನುವುದರ ಕಡೆ ಆಲೋಚನೆಯೂ ಇಲ್ಲ. ಆ ಕಾರಣದಿಂದ ರಸ್ತೆಗಳು ಪದೇ ಪದೇ ಹಾಳಾಗುತ್ತಿವೆ. ಆದುದರಿಂದ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಅದನ್ನು ಗಮನದಲ್ಲಿಟ್ಟುಕೊಂಡು ಮುಂದೆ ಇಲಾಖೆಗೆ ಹೆಚ್ಚು ಹಣ ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು: ಯಡಿಯೂರಪ್ಪನವರೆ, ಜಾಲಪ್ಪನವರಿದ್ದಾಗ ಖಾಸಗಿಯಾಗಿ ಕುಳಿತು ಮಾತನಾಡುವಾಗ ಹೇಳುತ್ತಿದ್ದರು. ಏನೆಂದರೆ, ಈ ಸಿದ್ಧರಾಮಯ್ಯ ಹೇಗೆಂದರೆ, ಹಳೆಯ ನಿಧಿ ಹತ್ತಿರ ನಾಗರ ಹಾವೊಂದು ಯಾವಾಗಲೂ ಹೆಡೆ ಬಿಚ್ಚಿ ನಿಧಿಯನ್ನು ಕಾವಲು ಕಾಯುತ್ತಿರುತ್ತದಲ್ಲಾ, ಹಾಗೆ ಟ್ರೆಜರಿಯನ್ನು ಕಾಯುತ್ತಿದ್ದಾರೆ. ಒಂದು ಕಾಸೂ ಬಿಚ್ಚುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಹಳೆಯ ನಿಧಿ ಮೇಲೆ ಯಾವಾಗಲೂ ಒಂದು ಸರ್ಪ ಕಾವಲು ಕಾಯುತ್ತಾ ಕುಳಿತಿರುತ್ತದಂತೆ.

ಶ್ರೀ ಸಿದ್ಧರಾಮಯ್ಯ: ಅದರಲ್ಲಿ ನಿಮಗೆ ನಂಬಿಕೆ ಇದೆಯಾ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇಲ್ಲ.

ಶ್ರೀ ಸಿದ್ಧರಾಮಯ್ಯ: ಹಾಗಾದರೆ, ಕುಳಿತುಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಮ್ಮ ಹಣಕಾಸಿನ ಸಚಿವರು ಮಾಡಬೇಕಾಗಿರುವುದೇನೆಂದರೆ, ಕೆರೆಯ ನೀರನ್ನು ಕೆರೆಗೆ ಚೆಲ್ಲಬೇಕು. ನೀವು ನಿಧಿ ಸಂಗ್ರಹಿಸಿ ಸರ್ಪದಂತೆ ಕಾಯುವುದಕ್ಕಲ್ಲ. ಜನ ಸಾಮಾನ್ಯರು ಕೊಟ್ಟ ತೆರಿಗೆಯನ್ನು ಆದಷ್ಟು ಬೇಗ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸುವುದರ ಮುಖಾಂತರ ಅವರಿಗೆ ತಲುಪಿಸುವಂತಾಗಬೇಕು.

ಶ್ರೀ ಸಿದ್ಧರಾಮಯ್ಯ: ಅದರ ಬಗ್ಗೆ ಕಟ್ಟುನಿಟ್ಟಾಗಿ ಮಾಡುತ್ತಿದ್ದೇವೆ, ನೀವ್ಯಾರೂ ಸಂಶಯ ಇಟ್ಟುಕೊಳ್ಳಬೇಕಾಗಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಕೆರೆಯ ನೀರನ್ನು ಕೆರೆಗೆ ಚೆಲ್ಲಬೇಕೆಂದು ಮಾನ್ಯ ಹಿರಿಯ ಸದಸ್ಯರಾದ ಯಡಿಯೂರಪ್ಪನವರು ಹೇಳಿದರು. ಕೆರೆಗೆ ನೀರು ಬರುವಂತೆ ಸಹ ಮಾಡಿಕೊಳ್ಳಬೇಕಲ್ಲಾ ಆ ವ್ಯವಸ್ಥೆಯಾದರೆ ನೀರು ಚೆಲ್ಲುವುದಕ್ಕೂ ವ್ಯವಸ್ಥೆಯಾಗುತ್ತದೆ. ಕೆರೆಗೆ ನೀರಿಲ್ಲವೆಂದರೆ ಹೇಗೆ?

ಶ್ರೀ ಬಿ.ಎಸ್.ಯಡಿಯೂರಪ್ಪ: ಕೆರೆಯಲ್ಲಿರುವ ಹೂಳು ತೆಗೆದು ನೀರು ನಿಲ್ಲುವಂಥ ವ್ಯವಸ್ಥೆ ಮಾಡಿಕೊಳ್ಳಬೇಕು. ತಾವು ಸಂಪನ್ಮೂಲ ಕ್ರೋಢೀಕರಿಸುವುದರತ್ತ ಗಮನ ಕೊಡುತ್ತಿಲ್ಲ. ಒಂದು ಕಡೆ ಸೋರಿ ಹೋಗುತ್ತಿದ್ದರೆ ಇನ್ನೊಂದು ಕಡೆ ಅಭಿವೃದ್ಧಿ ಕಾರ್ಯಗಳಿಗೆ ಹಣ ಖರ್ಚಾಗುತ್ತಿಲ್ಲ.

ಅಧ್ಯಕ್ಷರು: ರಾಜರ ಕಾಲದ ಕಾಲುವೆಗಳಿವೆಯೆಲ್ಲಾ, ಅವೆಲ್ಲವೂ ಸಿಲ್ಟ್ ಅಪ್ ಆಗಿವೆ.

ಶ್ರೀ ಚಂದ್ರಕಾಂತ ಬೆಲ್ಲದ್: ಕೆರೆ ತುಂಬದೆ ಸಿಕ್ಕಿದ ಕಡೆಗೆ ನೀರು ಹರಿದು ಕೋಡಿ ಹೋಗುತ್ತಿದೆ. ಅದನ್ನು ಬಂದ್ ಮಾಡುವ ಕಡೆಗೆ ಹೆಚ್ಚು ಗಮನ ಕೊಡುತ್ತಿಲ್ಲವೆಂದು ಹೇಳಬೇಕಾಗುತ್ತದೆ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೆ, ಬೆಣ್ಣೆಹಳ್ಳಿ ಸೇತುವೆ ಬಗ್ಗೆ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರು. ಈ ಬೆಣ್ಣೆಹಳ್ಳಿ ಸೇತುವೆ 10 ಎಕನಾಮಿಕಲಿ ಇಂಪಾರ್ಟೆಂಟ್ ರಸ್ತೆಗಳಲ್ಲಿ ಒಂದಾಗಿದ್ದು ಕೇಂದ್ರ ಸರ್ಕಾರದಿಂದ ಮಂಜೂರಾಗಿರುವಂಥ ರಸ್ತೆಗಳಲ್ಲಿ ಸದರಿ ಸೇತುವೆ ಕಾಮಗಾರಿಯೂ ಆಗಬೇಕಾಗಿದೆ. ಈ ರಸ್ತೆಯಲ್ಲಿ ಸುಮಾರು ಒಂದು ಕೋಟಿ 78 ಲಕ್ಷ ರೂಪಾಯಿಗಳ ಸೇತುವೆ ಕಾಮಗಾರಿ ಆಗಬೇಕಾಗಿರುವುದರಿಂದ ಡೀಟೆಲ್ ಸರ್ವೆ ನಡೆಯುತ್ತಿದೆ. ಇದಾದ ನಂತರ ಸದರಿ ಕೆಲಸವನ್ನು ತೆಗೆದುಕೊಳ್ಳುವುದಾಗಿ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ವಿಷಯ: ಪಾಂಡವಪುರದಲ್ಲಿ ರಸ್ತೆಗಳ ಅಭಿವೃದ್ಧಿ